ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ನೀವು ಡಿವೈಡ್ ಆಂಡ್ ರೂಲ್ ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ.

ಅಧ್ಯಕ್ಷರು.—ಶ್ರೀ ಎನ್. ಟಿ. ಬೊಮ್ಮಣ್ಣ ಗೈರು ಹಾಜರಿ.

ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುವುದು

೧೨೬೯. ಶ್ರೀ ಎನ್. ಎಂ. ಅಡ್ಯಂತಾಯ (ಸಂರತ್ಕಲ್).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಏಪ್ರಿಲ್ ೧೯೬೬ ರಿಂದ ಮಾರ್ಚ್ ೧೯೬೮ರವರೆಗೆ ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಬಸ್‌ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ?

ಆ) ಮೇಲ್ಕಂಡ ಮಾರ್ಗಗಳಲ್ಲಿ ರಾಷ್ಟ್ರೀಕರಣ ಪೂರ್ವ ಹಾಗೂ ರಾಷ್ಟ್ರೀಕರಣದ ನಂತರ ಓಡಾಡುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಇ) ಈ ರಾಷ್ಟ್ರೀಕರಣದಿಂದ ನಿರುದ್ಯೋಗಿಗಳಾಗಿರುವ ನೌಕರರ ಸಂಖ್ಯೆ ಎಷ್ಟು.

ಈ) ಈ ನೌಕರರ ಭವಿಷ್ಯಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಯವರು).—

ಅ) ಏಪ್ರಿಲ್ ೧೯೬೬ ರಿಂದ ಮಾರ್ಚ್ ೧೯೬೮ರವರೆಗೆ ರಾಯಚೂರು ಜಿಲ್ಲೆಯಲ್ಲಿ ೧೭ ಮಾರ್ಗಗಳು ಮತ್ತು ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ—ದಾವಣಗೆರೆ ವಿಕಮಾರ್ಗವನ್ನು ರಾಷ್ಟ್ರೀಕರಣಕ್ಕೆ ಒಳಪಡಿಸಲಾಗಿದೆ.

ಆ) ರಾಯಚೂರು ಜಿಲ್ಲೆಯಲ್ಲಿ ರಾಷ್ಟ್ರೀಕರಣಕ್ಕೆ ಮುಂಚೆ ೧೨೮ ಬಸ್ಸುಗಳು ಓಡಾಡುತ್ತಿದ್ದವು. ರಾಷ್ಟ್ರೀಕರಣದ ನಂತರ ೨೪೨ ಬಸ್ಸುಗಳು ಓಡುತ್ತಿವೆ.

ಚಿತ್ರದುರ್ಗ—ದಾವಣಗೆರೆ ಮಾರ್ಗದ ಮೇಲೆ ೨೮ ಬಸ್ಸುಗಳು ಓಡುತ್ತಿದ್ದವು, ರಾಷ್ಟ್ರೀಕರಣದ ನಂತರ ೪೮ ಬಸ್ಸುಗಳು ಓಡುತ್ತಿವೆ.

ಇ) ರಾಷ್ಟ್ರೀಕರಣದಿಂದ ನಿರುದ್ಯೋಗಿಗಳಾದವರ ನಿರ್ದಿಷ್ಟ ಸಂಖ್ಯೆ ತಿಳಿಸಲು ಸಾಧ್ಯವಾಗುತ್ತಿಲ್ಲ. ಕಾರಣವೇನೆಂದರೆ ತುಂಬ ಹೆಚ್ಚಿನ ಪ್ರಮಾಣದಲ್ಲಿ ಅರ್ಜಿಗಳು ಬಂದಿರುವುದು ಹಾಗೂ ನಿರ್ದಿಷ್ಟ ಮಾಹಿತಿ ಯಿಲ್ಲದಿರುವುದು.

ಈ) ಈ ರಾಷ್ಟ್ರೀಕರಣದಿಂದ ಕೆಲಸ ಕಳೆದುಕೊಂಡವರ ಭವಿಷ್ಯಕ್ಕಾಗಿ ರಾಜ್ಯ ಸರ್ಕಾರವು ಸಾರಿಗೆ ಸಂಸ್ಥೆಗೆ ಒಂದು ನೀತಿಗೆ ಒಳಪಡುವಂತೆ ನಿರ್ದಿಷ್ಟವಾದ ಸಂಖ್ಯೆಯ ನೌಕರರನ್ನು ತೆಗೆದುಕೊಳ್ಳಲು ಆದೇಶ ಕೊಟ್ಟಿದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ೧೯೬೬ ಏಪ್ರಿಲ್ ನಿಂದ ಮಾರ್ಚ್ ೧೯೬೮ ರವರೆಗೆ ೧೭ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದು ಈ ಸರ್ಕಾರದ ರಾಷ್ಟ್ರೀಕರಣದ ಬಗ್ಗೆ ಇರುವಂತಹ ಜಡ್ಡು ಮನೋಭಾವವನ್ನು ತೋರಿಸುತ್ತದೆ. ಇದರ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇಲ್ಲಿ ನನ್ನ ಪ್ರಶ್ನೆ ಇಷ್ಟೆ, ಇವರು ರಾಷ್ಟ್ರೀಕರಣ ಮಾಡಿರುವ ಬಸ್‌ಗಳ ಪೈಕಿ the number of individual bus operators affected. ಇದಕ್ಕೆ ಉತ್ತರ ಬೇಕು. ಹಾಗೂ ನನ್ನ 'ಇ' ಪ್ರಶ್ನೆಗೆ ಉತ್ತರವಾಗಿ ಇಲ್ಲಿ ಹಾರಿಕೆ ಉತ್ತರವನ್ನು ಕೊಟ್ಟಿದ್ದಾರೆ They have replied, 'The exact figures cannot be arrived at because of receipt of innumerable and in some cases incomplete applications. ಇಂತಹ ಒಂದು ಸಂದರ್ಭದಲ್ಲಿ ರಾಷ್ಟ್ರೀಕರಣ ಮಾಡಿದಂತೆ ಒಂದು ಬಸ್‌ಗೆ ಇಷ್ಟು ಜನರು ಎಂದು ಅಂದರೆ ನಾಲ್ಕೈದು ಜನರ ಪ್ರಕಾರ ಲೆಕ್ಕ ತೆಗೆದುಕೊಂಡು ಆ ಬಸ್‌ನಲ್ಲಿ ಕೆಲಸ ಮಾಡುತ್ತಿದ್ದ ಆಪರೇಟರ್ಸ್ ಹೆಸರುಗಳನ್ನು ತೆಗೆದುಕೊಂಡು ಹಾಗೂ ಆ ಕಾರ್ಮಿಕರಿಂದ ಅರ್ಜಿಗಳನ್ನು ತೆಗೆದುಕೊಂಡು ಕೆಲಸವನ್ನು ಒದಗಿಸಬೇಕಾಗಿತ್ತು. ಆದರೆ ಇವರು ಹೊಸದಾಗಿ ರಾಷ್ಟ್ರೀಕರಣ ಮಾಡಿದ ಸುಮಾರು ೧೫೬ ಮಾರ್ಗ

ಗಳಲ್ಲಿ ಒಬ್ಬ ಕಾರ್ಮಿಕನನ್ನೂ ಸಹ ಕೆಲಸಕ್ಕೆ ತೆಗೆದುಕೊಂಡಿಲ್ಲ. ಇದು ಈ ಸರ್ಕಾರದ ಹಾಗೂ ಇಲಾಖೆಯ ಕಾರ್ಮಿಕ ನೀತಿಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಬಸ್ ರಾಷ್ಟ್ರೀಕರಣದ ಬಗ್ಗೆ ಈ ಸರ್ಕಾರಕ್ಕೆ ಜಡ್ಡು ಮನೋಭಾವ ಇದೆಯೇ ಮತ್ತು ಇದು ಸರ್ಕಾರದ ನೀತಿಯೇ ಎಂದು ಮಾನ್ಯ ಆಡ್ಯಂತಾಯ ಅವರು ಪ್ರಶ್ನೆ ಎತ್ತಿದ್ದಾರೆ. ಈ ಬಗ್ಗೆ ನನ್ನ ಇಲಾಖೆ ಬೇಡಿಕೆಗಳು ಬಂದಾಗ ನಮ್ಮ ಪಕ್ಷದ ಸರ್ಕಾರ ಮಾಡಿರುವ ಕೆಲಸಗಳ ಬಗ್ಗೆ ಹಾಗೂ ಅವರ ಕಾಲದಲ್ಲಿ ಮಾಡಿರುವಂತಹ ಕೆಲಸಗಳ ಬಗ್ಗೆ ನಾನು ವಿವರವಾಗಿ ವಿವರಿಸುತ್ತೇನೆ. ಈಗ ಪ್ರಶ್ನೋತ್ತರ ಸಮಯವಾದ ಕಾರಣ, ಅವರ ಎರಡು ಉಪ ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಡುತ್ತೇನೆ. ರಾಷ್ಟ್ರೀಕರಣ ಮಾಡಿದ ಪ್ರತಿ ಬಸ್‌ನಲ್ಲಿ ಕೆಲಸ ಮಾಡುತ್ತಿದ್ದ ಆಪರೇಟರ್ಸ್ ಸಂಖ್ಯೆಯನ್ನು ಕೇಳಿದ್ದಾರೆ. ಅದು ಪ್ರತ್ಯೇಕ ಪ್ರಶ್ನೆ. ಆದಕ್ಕೆ ಉತ್ತರವನ್ನು ಅವರಿಗೆ ಕಳುಹಿಸಿಕೊಡುತ್ತೇನೆ ಈ ಮೊದಲು ರಾಷ್ಟ್ರೀಕರಣ ಮಾಡಿದಂಥ ಮಾರ್ಗಗಳಲ್ಲಿ ಕೆಲಸ ಕಳೆದುಕೊಂಡಿರುವವರ ಪೈಕಿ ಇಷ್ಟೇ ಜನರಿಗೆ ನಾವು ಕೆಲಸ ಕೊಡಬೇಕು ಎಂಬ ಬಗ್ಗೆ ಸರ್ಕಾರದ ಆಜ್ಞೆ ಇರಲಿಲ್ಲ. ಈಗ ನಾವು ಮೂರು ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿರುವುದರಿಂದ ಪ್ರತಿ ಬಸ್‌ಗೆ ೪,೪೫೦ ಪ್ರಮಾಣದಲ್ಲಿ ಇಂತಿಂಥ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಒಂದು ನಿರ್ದಿಷ್ಟವಾದ ಸೂಚನೆಯನ್ನು ಸಾರಿಗೆ ಸಂಸ್ಥೆಗೆ ಸರ್ಕಾರದಿಂದ ಕೊಟ್ಟಿದ್ದೇವೆ. ಈ ಮಾರ್ಗಗಳಲ್ಲಿ ಕೆಲಸ ಮಾಡುತ್ತಿದ್ದವರ ಪೈಕಿ ಹೆಸರಂಗಳನ್ನು ಕೊಡುವಾಗ ಹೆಚ್ಚಿನ ಸಂಖ್ಯೆಯಲ್ಲಿ ಕೊಟ್ಟಿದ್ದಾರೆ, ೨-೩ ಸಾವಿರ ಅರ್ಜಿಗಳು ಬಂದಿದೆ. ಇಂತಹ ಸಂದರ್ಭದಲ್ಲಿ ಯಾವುದೇ ರೀತಿಯ ದುರ್ವ್ಯವಹಾರ ನಡೆಯಬಾರದೆಂದು ಮೇಲ್ಪಟ್ಟಿದ ಅಧಿಕಾರಿಗಳು ಇರುವಂತಹ ಒಂದು ಸಣ್ಣ ಸಮಿತಿಯನ್ನು ನೇಮಕ ಮಾಡಲಾಗಿದೆ. ಅವರು ಪ್ರತಿಯೊಂದು ಅರ್ಜಿಯನ್ನು ಪರಿಶೀಲನೆ ಮಾಡುತ್ತಾರೆ. ಇನ್ನು ಎರಡು ತಿಂಗಳೊಳಗಾಗಿ ಯಾರು ಯಾರು ನಿಜವಾಗಿಯೂ ಖಾಸಗಿ ಬಸ್‌ಗಳಲ್ಲಿ ಕೆಲಸ ಮಾಡುತ್ತಿದ್ದರು ಹಾಗೂ ರಾಷ್ಟ್ರೀಕರಣದಿಂದ ಈಗ ನಿರುದ್ಯೋಗಿಗಳಾಗಿದ್ದಾರೆ, ಅಂತಹವರೆಲ್ಲರಿಗೂ ಕೆಲಸ ಕೊಡತಕ್ಕಂಥ ಭರವಸೆಯನ್ನು ತಪ್ಪು ಮೂಲಕ ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ಎನ್. ಎಂ. ಆಡ್ಯಂತಾಯ —ಈ ಹಿಂದೆ ರಾಷ್ಟ್ರೀಕರಣ ಮಾಡಿದಂಥ ಮಾರ್ಗಗಳಲ್ಲಿ ಖಾಸಗಿ ಬಸ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಆದರೆ ಏಪ್ರಿಲ್ ೧೯೮೬ ರಿಂದ ಮಾರ್ಚ್ ೧೯೮೮ರವರೆಗೆ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿರುವ ಕಡೆ ಕೆಲಸ ಕಳೆದುಕೊಂಡಿರುವವರಿಗೆ ಇನ್ನು ಕೆಲಸ ಕೊಟ್ಟಿಲ್ಲ. ಕಳೆದ ಎರಡು ವರ್ಷಗಳಿಂದ ಇವರಿಗೆ ಅಲ್ಲಿ ಯಾರು ಯಾರು ಕಾರ್ಮಿಕರು ಕೆಲಸ ಮಾಡುತ್ತಿದ್ದರೆಂಬುದನ್ನು ಪತ್ತೆ ಮಾಡಲು ಸಾಧ್ಯವಾಗುತ್ತಿಲ್ಲ ವೆಂಬ ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ ಇಷ್ಟರವರೆಗೆ ಎಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು. ಇಲ್ಲದಿದ್ದರೆ ಇದೇನು ಹಾರಿಕೆಯ ಪ್ರಶ್ನೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕೆಲಸಕ್ಕೆ ತೆಗೆದುಕೊಂಡಿಲ್ಲವೆಂದು ಹೇಳಿದ್ದೇನೆ. ಇದಕ್ಕೆ ಕಾರಣವನ್ನು ಸಹ ಕೊಟ್ಟಿದ್ದೇನೆ. ಆದರೂ ಇದು ಹಾರಿಕೆಯ ಪ್ರಶ್ನೆ ಎಂದು ಅವರೇ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹೊಸದಾಗಿ ನಾನು ಆದೇಶ ಕೊಟ್ಟಿದ್ದೇನೆ, ಅದರ ಪ್ರಕಾರ ರೆಕ್ರೂಟ್‌ಮೆಂಟ್ ಮಾಡುತ್ತಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ರೆಕ್ರೂಟ್‌ಮೆಂಟ್ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನ್ವಯಿಸಿದಿರೋ ಹೇಗೆ ? ಏಕೆಂದರೆ ಒಂದು ಜಾಗದಲ್ಲಿ ಕೆಲಸ ಮಾಡುತ್ತಾ ಇರುತ್ತಾರೆ. ಹೇಗಾದರೂ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸರ್ಕಾರಿ ನೌಕರಿ ಸಿಗುತ್ತದೆ ಅಂದರೆ ೨-೩ ಸರ್ಟಿಫಿಕೇಟ್‌ಗಳನ್ನು ಪ್ರೊಡ್ಯೂಸ್ ಮಾಡಿ ಕೆಲಸ ತೆಗೆದುಕೊಳ್ಳುತ್ತಾರೆ. ಇದರಿಂದ ಕಾನೂನು ಪ್ರಕಾರ ನಿಜವಾಗಿ ಯಾರಿಗೆ ಅಲ್ಲಿ ನೌಕರಿ ಕೊಡಬೇಕಾಗಿತ್ತೋ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಪೆಕೆನ್ಸಿ ಇದ್ದರೆ ರೋಸ್ಟರ್ ಸಿಸ್ಟಂ ಫಾಲೋಮಾಡಿ ಕೊಡುತ್ತಿದ್ದೀರಿ. ಈ ರೀತಿ ನೇರವಾಗಿ ಅಪಾಯಿಂಟ್‌ಮೆಂಟ್ ಮಾಡುವ ಕಾರಣದಿಂದ ರೋಸ್ಟರ್ ಸಿಸ್ಟಂನಲ್ಲಿ ಸಿಗತಕ್ಕವರಿಗೆ ತೊಂದರೆಯಾಗುತ್ತದೆ ಆದ್ದರಿಂದ ಇದಕ್ಕೆ ಏನಾದರೂ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಎಷ್ಟು ವೆಕೆನ್ಸಿ ಫಿಲಿಪ್ ಮಾಡುತ್ತೀರಿ, ಅದನ್ನು ಉಳಿಸಿ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡುವ ವ್ಯವಸ್ಥೆ ಮಾಡುವುದಕ್ಕೆ ಸ್ಪಷ್ಟ ಪಡಿಸುತ್ತೀರಾ ?

ಶ್ರೀ ಎಸ್. ಎಂ. ಆಡ್ಯಂತಾಯ.—ಅವರು ಹಾರಿಕೆ ಉತ್ತರ ಕೊಟ್ಟಿದ್ದಾರೆ, ಆದ್ದರಿಂದ ಹಾರಿಕೆ ಪ್ರಶ್ನೆ ಎಂದು ಹೇಳಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಖಾರ್ಗೆಯವರು ರೋಸ್ಟರ್ ಸಿಸ್ಟಂ ಬಗ್ಗೆ ಹೇಳಿದ್ದಾರೆ. ರೋಸ್ಟರ್ ಸಿಸ್ಟಮನ್ನು ಅಳವಡಿಸಿಕೊಳ್ಳಲಿಕ್ಕೆ ಕಷ್ಟವಾಗುತ್ತದೆ. ರೋಸ್ಟರ್ ಸಿಸ್ಟಂ ಪ್ರಕಾರ ತೆಗೆದುಕೊಂಡಿದ್ದೇವೆ. ಅನ್ ಎಂಪ್ಲಾಯ್ ಆಗಿದ್ದಾರೆ ಅವರೆಲ್ಲರಿಗೂ ಕೆಲಸ ಕೊಡುವುದು ಕಷ್ಟವಾಗುತ್ತದೆ. ಆದರಿಂದ ನಾವು ಇವರಿಗೆ ಅನ್ಯಾಯವಾಗುತ್ತದೆ ಎನ್ನುವ ದೃಷ್ಟಿಯಿಂದ ಏಜ್. ಕ್ವಾಲಿಫಿಕೇಷನ್ ಪ್ರತಿಯೊಂದನ್ನು ರಿಲ್ಯಾಕ್ಸ್ ಮಾಡಿ ನಿಜವಾಗಿ ಯಾರು ಅನ್ ಎಂಪ್ಲಾಯ್ಡ್ ಆಗಿದ್ದಾರೆ ಅವರೆಲ್ಲರನ್ನೂ ತೆಗೆದುಕೊಳ್ಳುವುದಕ್ಕೆ ಸಾರಿಗೆ ಸಂಸ್ಥೆಗೆ ಆದೇಶವನ್ನು ಕೊಟ್ಟಿದ್ದೇವೆ. ಸಾರಿಗೆ ಸಂಸ್ಥೆ ರೋಸ್ಟರ್ ಸಿಸ್ಟಂ ಫಾಲೋ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದಲ್ಲಿ ಡ್ರೈವರ್ಸ್ ಕಡಿಮೆ ಇದ್ದರು. ಅದಕ್ಕೋಸ್ಕರ ೩ ತಿಂಗಳಲ್ಲಿ ೫೦೦ ಜನರನ್ನು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡತಕ್ಕಂಥ ಕ್ರಮವನ್ನು ಈಗಾಗಲೇ ನಾವು ತೆಗೆದುಕೊಂಡಿದ್ದೇವೆ.

ಶ್ರೀ ಎ. ಮಲ್ಲಿಕಾರ್ಜುನ ಖಾರ್ಗೆ.—ಇದು ಬಹಳ ಮುಖ್ಯವಾದದು. ಸ್ವಲ್ಪ ಮನಸ್ಸು ಮಾಡಿದರೆ ನ್ಯಾಯ ಸಿಗತಕ್ಕ ದೃಷ್ಟಿಯಿಂದ ಕೇಳುತ್ತಾ ಇದ್ದೇನೆ. ನೀವು ೫೦೦ ಜನರನ್ನು ರೆಕ್ರೂಟ್ ಮಾಡುತ್ತೀರಿ...

ಶ್ರೀ ಪಿ. ಜಿ ಆರ್. ಸಿಂಧ್ಯ.—ಆ ಭಾಗದ ಶಾಸಕರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇನೆ.

ಸರ್ಕಾರದ ಮೇಲೆ, ಮತ್ತು ಸಾರಿಗೆ ಸಂಸ್ಥೆ ಮೇಲೆ ಲೋಪದೋಷಗಳಾಗಿವೆ ಎನ್ನತಕ್ಕಂಥ ಆಪಾದನೆ ಬರತಕ್ಕಂಥಾದ್ದು ಬೇಕಾಗಿಲ್ಲ. ಆ ಭಾಗದ ಶಾಸಕರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇನೆ ಸಮಿತಿ ಸಭೆ ಸೇರಿಲ್ಲ. ಇವತ್ತಿನಿಂದ ಕೆಲಸವನ್ನು ಪ್ರಾರಂಭ ಮಾಡುತ್ತಾ ಇದ್ದಾರೆ. ಅವರ ಸಲಹೆಯನ್ನು ಪಡೆದುಕೊಳ್ಳುತ್ತೇನೆ.

ಶ್ರೀ ಎ. ಮಲ್ಲಿಕಾರ್ಜುನ ಖಾರ್ಗೆ.—ಶಾಸಕರ ಅಭಿಪ್ರಾಯವನ್ನು ತೆಗೆದುಕೊಳ್ಳಿ. ಕಾನೂನಿನಲ್ಲಿ ರತಕ್ಕಂಥ ರಕ್ಷಣೆಯನ್ನು ಯಾವರೀತಿ ಕೊಡಬೇಕೋ ಆ ರೀತಿ ಕೊಡಬೇಕಾಗುತ್ತದೆ ಬರೀ ಅವರ ಅಭಿಪ್ರಾಯದ ಪ್ರಕಾರ ಹೋಗುವುದಕ್ಕಾಗುವುದಿಲ್ಲ. ಕಾನೂನಿಗ ವಿರುದ್ಧವಾಗಿ ಅಭಿಪ್ರಾಯ ಕೊಟ್ಟರೆ ಅದರಂತೆ ಮಾಡುವುದಕ್ಕಾಗುವುದಿಲ್ಲ. ಇನ್ ಫ್ಯೂಚರ್ ೫೦೦ ಜನರನ್ನು ರೆಕ್ರೂಟ್ ಮಾಡುತ್ತೀರಿ ಎಂದು ತಿಳಿದುಕೊಳ್ಳಿ. To fill up the backlog why should you not go in for special Recruitment ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದಕ್ಕೆ ಒಪ್ಪಿದ್ದೇನೆ.

ಪ್ರಶ್ನೆ ೩೩೦ (೧೧೨೬)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿ

೧೧೨೬. ಶ್ರೀ ಇದಿನಬ್ಬ.(ಉಳ್ಳಾಲ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಇರುವ ನ್ಯಾಯಬೆಲೆ ಅಂಗಡಿಗಳೆಷ್ಟು ?

ಆ) ಇದರಲ್ಲಿ ಖಾಸಗಿಯವರ ಸಂಖ್ಯೆ ಎಷ್ಟು , ಸಹಕಾರಿ ಸಂಘ ಸಂಸ್ಥೆಗಳು ನಡೆಯುವಂತಾದ್ದು ಎಷ್ಟು ?

ಇ) ಈ ನ್ಯಾಯಬೆಲೆಯ ಅಂಗಡಿಗಳಲ್ಲಿ ಗ್ರಾಹಕರಿಗೆ ಸರಿಯಾದ ಆಹಾರ ಸರಬರಾಜು ಪದಾರ್ಥಗಳನ್ನು ಮಾಡದಿರುವ ಪ್ರಕರಣಗಳೇನಾದರೂ ಇವೆಯೇ, ಇದ್ದರೆ ಅವುಗಳ ಸಂಖ್ಯೆ ಎಷ್ಟು ಎಲ್ಲೆಲ್ಲಿ

ಈ) ಅಂತಹ ವಂಚನೆ ಪ್ರಕರಣಗಳಿದ್ದಲ್ಲಿ ಅವುಗಳ ಬಗ್ಗೆ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ,